6(i). ಶಿರಾ ಪಟ್ಟಣಕ್ಕೆ ಕುಡಿಯುವ ನೀರಿನ ಸೌಕರ್ಯ

ಶ್ರೀ ಸಿ. ಚೆನ್ನಿಗಪ್ಪ (ಕೊರಟಗೆರೆ) : ಅಧ್ಯಕ್ಷರೇ ಶಿರಾ ಪಟ್ಟಣಕ್ಕೆ ಮೂರು ವರ್ಷಗಳ ಹಿಂದೆ ಕುಡಿಯುವ ನೀರು ಪೂರೈಕೆಗಾಗಿ 5 ಕೋಟಿ ರೂಪಾಯಿಗಳ ವ್ಯವಸ್ಥೆ ಮಾಡಿ ಸರ್ಕಾರ ಆದೇಶ ಹೊರಡಿಸಿತ್ತು. ಟೆಂಡರೂ ಆಗಿ ಕೆಲಸ ಕಾಲುಭಾಗ ಶುರು ಆಗಿದೆ. ಈಗ ಆ ಕೆಲಸ ಸ್ತಗಿತವಾಗಿದೆ. ದಯಮಾಡಿ ಸರ್ಕಾರ ಕೂಡಲೇ ಆ ಕೆಲಸ ಶುರು ಮಾಡುವ ಮೂಲಕ ಅಲ್ಲಿ ಸತ್ಯಾಗ್ರಹ ಕೂತಿದ್ದಾರೆ ಆ ಶಿರಾ ನಗರಕ್ಕೆ ಕುಡಿಯುವ ನೀರು ವ್ಯವಸ್ಥೆ ಮಾಡಿಕೊಡಬೇಕೆಂದು ಸರ್ಕಾರವನ್ನು ನಾನು ವಿನಂತಿ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಶಿರಾದ ಜನ ಕುಡಿಯುವ ನೀರಿಗಾಗಿ ಗಾಯತ್ರಿ ಜಲಾಶಯದಿಂದ ನೀರು ಕೊಡಲಿಕ್ಕೆ ನಮ್ಮ ಸರ್ಕಾರದ ಕಾಲದಲ್ಲಿ ಆಜ್ಞೆಯಾಗಿ, ಕಂಟ್ರಾಕ್ಟರನ್ನು ಫಿಕ್ಸ್ ಮಾಡಿ ಕೆಲಸವೂ ಪ್ರಾರಂಭವಾಗಿತ್ತು. ಈಗ ನಾನಾ ಕಾರಣಗಳಿಗಾಗಿ ಸರ್ಕಾರ ಆ ಆಜ್ಞೆಯನ್ನು ನಿಲ್ಲಿಸಿದ್ದಾರೆ. ಬೇರೆ ಕಡೆಯಿಂದ ನೀರು ತರಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ತಮಗೆ ಗೊತ್ತಿದೆ: ಶಿರಾದಲ್ಲಿ ಕಳೆದ ಬಾರಿ ರೈತರು ಯಾವರೀತಿ ಪ್ರತಿಭಟನೆ ಮಾಡಿದರು ಅಂತ. ಅದು ರಾಷ್ಟ್ರೀಯ ಹೆದ್ದಾರಿಯಲ್ಲಿದೆ, ಇವತ್ತಿನಿಂದ ಪ್ರತಿಭಟನೆ ಪ್ರಾರಂಭ ಮಾಡಿದ್ದಾರೆ. ದಯವಿಟ್ಟು ಅದರ ಬಗ್ಗೆ ಸ್ಪಷ್ಟ ಉತ್ತರ ಕೊಡಬೇಕು. ಗಾಯತ್ರಿ ಜಲಾಶಯದಲ್ಲಿ ನೀರಿದೆ, ಈಗ ನೀರು ಕೊಡುವುದರಿಂದೇನೂ ಉಪಯೋಗವಾಗುವುದಿಲ್ಲ. ಈಗಾಗಲೇ ಲಕ್ಷಾಂತರ ರೂಪಾಯಿಗಳನ್ನು ಆ ಯೋಜನೆ ಮೇಲೆ ಖರ್ಚು ಮಾಡಿದ್ದಾರೆ. ನಗರದಲ್ಲಿ ಸಾರ್ವಜನಿಕರಿಂದ ಹಾಹಾಕಾರ ಎದ್ದಿದೆ. ಅದರಿಂದ ಸರ್ಕಾರದವರು ಇದರ ಬಗ್ಗೆ ನಿರ್ದಿಷ್ಟವಾಗಿ ನಾಳೇನೆ ಹೇಳಿ. ನಿಮ್ಮ ಅಧಿಕಾರಿಗಳನ್ನು ಕರೆಸಿ, ಅಲ್ಲಿಯ ಸಂಬಂಧಪಟ್ಟ ಶಾಸಕರನ್ನೂ ಸಹಿತ ಕರೆಸಿ, ಇವತ್ತು ಸಾಯಂಕಾಲ ಒಂದು ಸಭೆಯನ್ನು ಮಾಡಿ. ಮಾನ್ಯ ಚೆನ್ನಿಗಪ್ಪನವರನ್ನೂ ಅದಕ್ಕೆ ಕರೆಸಿ. ಅದಕ್ಕೇನು ಪರಿಹಾರ ಏನು ಎನ್ನುವುದನ್ನು ತಾವು ದಯವಿಟ್ಟು ತಿಳಿಸಬೇಕಾಗುತ್ತದೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಮಾನ್ಯ ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸಿಂಧ್ಯಾರವರು ಮತ್ತು ಚೆನ್ನಿಗಪ್ಪನವರು ಶಿರಾ ಪಟ್ಟಣದ ಕುಡಿಯುವ ನೀರಿನ ಸಮಸ್ಯೆಯನ್ನು ಏನು ಪ್ರಸ್ತಾಪ ಮಾಡಿದ್ದಾರೆ, ತಾವು ಹೇಳಿದಂತೆ ನಾಳೆಗೆ ಸಮಗ್ರವಾದ ಮತ್ತು ತಮಗೆ ಸಮಾಧಾನ ತರತಕ್ಕಂಥ ಉತ್ತರವನ್ನು ಒದಗಿಸುತ್ತೇವೆ.

(ii) ಮಂಡ್ಯ ನಗರದಲ್ಲಿ ಕುಡಿಯುವ ನೀರಿನ ಸರಬರಾಜು ವಿಚಾರದಲ್ಲಿ ವಿದ್ಯುತ್ ತೊಂದರೆ:

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಅಧ್ಯಕ್ಷರೇ, ನಿನ್ನೆ ತಮಗೆ ಒಂದು ನೋಟೀಸನ್ನು ಕೊಟ್ಟಿದ್ದೆ. ಮಂಡ್ಯ ನಗರಕ್ಕೆ ಇರತಕ್ಕ ಕುಡಿಯುವ ನೀರಿನ ವ್ಯವಸ್ಥೆ ಎರಡು ಹಂತದ ಯೋಜನೆಯಿದ್ದರೂ ಕೂಡ ಕಳೆದ 15 ದಿವಸದಿಂದ ವಿದ್ಯುತ್ ಸಂಪರ್ಕದ ಒಂದು ಏರುಪೇರಿನಿಂದಾಗಿ ಇರುವ ಪೊಲ್ಟೇಜ್ ಬಹಳ ವ್ಯತ್ಯಾಸವಾಗಿ ನಮಗೆ ನೀರಿನ ತೊಂದರೆಯಾಗಿದ್ದು ನಮ್ಮ ಮಂಡ್ಯ ನಗರದ ಜನತೆ ಬಹಿರಂಗವಾಗಿ ಪ್ರದರ್ಶನ ಪ್ರತಿಭಟನಾ ಕಾರ್ಯಕ್ರಮಗಳೆಲ್ಲಾ

ಆಗಿ ಯುಗಾದಿ ಹಬ್ಬಕ್ಕೂ ಕೂಡ ವ್ಯವಸ್ಥಿತವಾಗಿ ನೀರು ಕೊಡಲಿಕ್ಕೆ ಬಹಳ ತೊಂದರೆಯಾದ ಕಾರಣದಿಂದ ಆ ಒಂದು ವಿದ್ಯುತ್ ಸಂಪರ್ಕವನ್ನು ಊಟ್ಗಳ್ಳಿ ಮಾರ್ಗದಿಂದ ಕೊಡಬೇಕೆಂದು ಮತ್ತು ವೋಲ್ಟೇಜಿನ ವ್ಯತ್ಯಾಸವನ್ನು ಕೂಡ ಸರಿಪಡಿಸಿಕೊಡಬೇಕೆಂದು ಹೇಳಿ ನಾನು ತಮ್ಮೂಲಕ ಮಾನ್ಯ ವಿದ್ಯುತ್ ಮಂತ್ರಿಗಳನ್ನು ಕೋರುತ್ತೇನೆ.

ಶ್ರೀ ವೀರಕುಮಾರ್ ಎ. ಪಾಟೀಲ್ (ಮಾನ್ಯ ಇಂಧನ ಸಚಿವರು) : ಮಾನ್ಯ ಅಧ್ಯಕ್ಷರೇ, ನಮ್ಮ ಸನ್ಮಾನ್ಯ ಶಾಸಕರು ಏನು ಹೇಳಿದ್ದಾರೋ ಅದು ನಿಜ ಇದೆ. ಸ್ವಲ್ಪ ಪ್ರಾಬ್ಲಂ ಆಗಿತ್ತು. ಅಲ್ಲಿ 66 ಕೆ.ವಿ.ಎ. ಬ್ರೇಕರ್ ಫೇಲ್ ಆಗಿತ್ತು. ಈಗ ಅದನ್ನು ಸರಿಪಡಿಸಿದ್ದೇವೆ. ನೀರು ಸರಬರಾಜು ಕೂಡ ಸರಿಯಾಗಿ ಆಗುತ್ತಿದೆ.

7. ಶಾಸನ ರಚನೆ

(ಅ) ವಿಧೇಯಕ ಮಂಡನೆ

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ(ತಿದ್ದುಪಡಿ) ವಿಧೇಯಕ, 2001

:ಮಂಡನೆಗೆ ಅನುಮತಿ ಕೋರಿಕೆ:

ಶ್ರೀ ಆರ್.ಬಿ. ತಿಮ್ಮಾಪುರ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, 2001ನೇ ಸಾಲಿನ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ: "2001ನೇ ಸಾಲಿನ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಆರ್.ಬಿ. ತಿಮ್ಮಾಪುರ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, 2001ನೇ ಸಾಲಿನ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : *ವಿಧೇಯಕವನ್ನು ಮಂಡಿಸಲಾಗಿದೆ.*

ಆ) ಪರ್ಯಾಲೋಚನ ಪ್ರಸ್ತಾವ

ವಿಧೇಯಕಗಳನ್ನು ಪರ್ಯಾಲೋಚಿಸುವುದು ಮತ್ತು ಅಂಗೀಕರಿಸುವುದು

ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ತಿದ್ದುಪಡಿ) ವಿಧೇಯಕ, 2001.

ಪರ್ಯಾಲೋಚನಾ ಪ್ರಸ್ತಾವ